

ಎಡದಿಂದ ಬಲಕ್ಕೆ:

1. ಲಂಕೆಯ ಅರಮನೆಯ ಸಿಂಗಾರ ಹೇಗಿದೆ? 4
3. ವ್ಯಾಜ್ಯವನ್ನು ಬಗೆಹರಿಸಿದ ವ್ಯಕ್ತಿಯದು ತುಂಬು ತಾರುಣ್ಯ 3
4. ಹನುಮನ ತತ್ವಗಳಿಗೆ ಎಲ್ಲೆಲ್ಲೂ ತುಂಬ ಪ್ರಾಮುಖ್ಯ 3
6. ಗುಣಿ ತೋಡಿ ನೆಟ್ಟು ಬೆಳೆದಿದ್ದು ಈ ಕಾಳು 4
7. ಅಲ್ಲಿನ ಕತ್ತಲನ್ನು ಹೋಗಲಾಡಿಸುವವರೆಗೂ... 3
9. ಸೋಲುತ್ತ, ಸೋಲುತ್ತ ಅದೇ ನಿರಂತರವಾಯಿತೇ? 3
11. ವಂಚನೆಗೆ ಸಿಲುಕಿ ಮೂರ್ಖನಾದನಲ್ಲ, ಅಯ್ಯೋ ಪಾಪ ಅನಿಸುತ್ತದೆ! 3
13. ಗಾಂಪರೆಲ್ಲ ಗುಂಪುಗೂಡಿ ಬಂದು ಸಂಬಳ ಕೇಳಿದರೇ? 3
15. ಅಭ್ಯಾಸ ಮಾಡಲು ಸಿದ್ಧವಿದ್ದರೂ ಕಲಿಕೆಯೇ ಈಗ ಹಿಂದುಮುಂದು 4
17. ಕದ್ದು ಮುಚ್ಚಿ ಓಡಾಡುತ್ತಿದ್ದಾನೇಕೆ ಆ ವೃದ್ಧ? 3
18. ಚಾಡಿ ಹೇಳುವವರನ್ನೆಲ್ಲ ಒಟ್ಟು ಮಾಡಲು ತಕ್ಕ ಜಗಲೀಕಟ್ಟೆ 3
19. ಪಕ್ಷಾಂತರ ಮಾಡಲು ಕಾದಿರುವವರ ಸಂಖ್ಯೆ ನೂರು ಸಾವಿರಗಟ್ಟಳೆ ಇದೆ 4

ಮೇಲಿಂದ ಕೆಳಕ್ಕೆ:

1. ಅನಾಥನಾದರೂ ಯಾರ ಮುಂದೆಯೂ ಆತ ಬಾಗಿ ನಿಂತಿಲ್ಲ 3
2. ಮಣ್ಣಿನ ಅರಮನೆಯಲ್ಲಿರುವ ಚೆಲುವೆ ಗೊತ್ತೇ? 3
3. ತಾಜಾತನ ಹಾಳಾಗದಂತೆ ಜೋಪಾನ 3
5. ವಿತರಿಸುವಂತಹ ಕೆಲಸ, ನಡೆಯಲಿ ಬೇಗ, ಬೇಗ 3
7. ತೆರೆಮರೆಯಲ್ಲೇ ಪ್ರಕಟವಾಯಿತು ಭೇದಭಾವ 4
8. ವ್ಯವಕಲನದ ಈ ಕ್ರಮ ಕಂಡು ತಬ್ಬಿಬ್ಬು! 4
9. ಅಪರೂಪದ ಕಾರ್ಯಕ್ರಮ, ಹೆಚ್ಚು ಕಡಿಮೆ ಇಲ್ಲದೆ ಮುಕ್ತಾಯ 4
10. ಗಾಡಿ ತಳ್ಳುವವನ ಸೊಂಟದಲ್ಲಿ ಇದೆಂಥ ಖಡ್ಗ! 4
12. ಸುಮಾರು ಎಷ್ಟಿರಬಹುದು ಅದಕ್ಕೆ ನೀಡಬೇಕಾದ ಶುಲ್ಕ? 3
14. ಗಡಿಯಾರವನ್ನು ಇದ್ದಲ್ಲೇ ಮಾಯಮಾಡಿದ್ದು ಇಂದ್ರಜಾಲ ಅಷ್ಟೆ 3
15. ಸಕ್ಕರೆಯಿಂದಲೇ ತಯಾರಾದದ್ದು ಈ ಎಲ್ಲವೂ 3
16. ವಿಚಿತ್ರವಾದ ಈ ಸುದ್ದಿಯ ಬಗೆಗೆ ನಿಮ್ಮದೇನು ಆಲೋಚನೆ? 3

## 06–08–2020 ಉತ್ತರಗಳು

ಎಡದಿಂದ ಬಲಕ್ಕೆ:

1.ಸಂಪಾದನೆ 3. ಸಂದೇಹ 4. ನಳಿನ 6. 'ರಳಾಕಪಿ' (=ಪಿಕಳಾರ ಹಿಂದುಮುಂದು) 7. ಅವಗುಣ 9. ಸುಧಾಕರ 12. ನವರಸ 15. ಗತಕಾಲ 17. ದಾದಾಗಿರಿ 18. ಕಲ್ಮಶ 19. ಮುನಿಸು 20. ಯಮಪುರಿ

ಮೇಲಿಂದ ಕೆಳಕ್ಕೆ:

1. ಸಂಹರಣ 2. ನೆನಪಿಸು 3. ಸಂಭವ 5. ನಡುಕ 7. ಅಧೀನ 8. ಗುಡಾರ 10. ಧಾವಂತ 11. ರಸಾಲ 13. ವಣಿಕ 14. ಸದಾಶಯ 15. ಗರಿಮುರಿ 16. ಕಾಡಿಸು

ಪ್ರಶ್ನಾಂಕಣ

# ಸಾಗರ ಸುಳಿ: ಏಕೆ, ಹೇಗೆ?

ನಮ್ಮ ಪೃಥ್ವಿಯ ಮೇಲ್ಮೈನ ಶೇಕಡ 71ರಷ್ಟು ವೈಶಾಲ್ಯವನ್ನು ಆವರಿಸಿರುವ ಪಾರಾವಾರದಲ್ಲಿ (ಚಿತ್ರ 2) ಅಪಾರವೆನಿಸುವಷ್ಟು ಜಲರಾಶಿ ಸಂಗ್ರಹವಾಗಿದೆ, ಹೌದಲ್ಲ? ಅದೆಷ್ಟೇ ಇದ್ದರೂ ಕಡಲಿನ ಈ ಜಲಸಾಮ್ರಾಜ್ಯ ನಿಶ್ಚಲ ಸ್ಥಿತಿಯಲ್ಲಿಲ್ಲ. ಭೋರ್ಗರೆವ ಅಲೆಗಳು, ನದಿಗಳಂತೆ ಹರಿದಾಡುವ ಸಾಗರ ಪ್ರವಾಹಗಳು ಇತ್ಯಾದಿ ವಿದ್ಯಮಾನಗಳ ಪರಿಣಾಮವಾಗಿ ಇಡೀ ಸಾಗರಾವಾರ ತಳದಿಂದ ಮೇಲ್ಮೈವರೆಗೆ ನಿರಂತರ ಚಲನಶೀಲವಾಗಿದೆ. ಬೀಸುವ ಗಾಳಿ, ಸಮಭಾಜಕ ಮತ್ತು ಧ್ರುವಗಳ ಸನಿಹದ ನೀರಿನ ತಾಪಾಂತರ, ಭೂಖಂಡದ ಅಂಚುಗಳು ಮತ್ತು ಭೂಮಿಯ ಸ್ವಭ್ರಮಣ ಇವೇ ಅದಕ್ಕೆ ಕಾರಣ.

ಆದರೆ, ವಿಸ್ಮಯ ಏನೆಂದರೆ, ಸಾಗರಗಳ ಮೇಲೆ ವಾಯುಮಂಡಲದ ಒತ್ತಡ ಅಧಿಕವಾಗಿರುವ ಕೆಲವಾರು ಪ್ರದೇಶಗಳಲ್ಲಿ ಜಲಧಿಯ ಮೇಲ್ಮೈನ ನೀರು ನಿಶ್ಚಲವಾಗಿ ಉಳಿದಿದೆ. ಲಕ್ಷಾಂತರದಿಂದ ಕೋಟಿಗಟ್ಟಳೆ ಚದರ ಕಿ.ಮೀ. ವಿಸ್ತಾರದ ಇಂತಹ ನಿಶ್ಚಲ ಜಲದ ಪ್ರದೇಶಗಳತ್ತ ಹರಿದು ಬರುವ ಉಷ್ಣೋದಕ ಮತ್ತು ಶೀತೋದಕ ಸಾಗರ ಪ್ರವಾಹಗಳು ಭೂಮಿಯ ಸ್ವಭ್ರಮಣದಿಂದಾಗಿ ಒಡಮೂಡುವ 'ಕೋರಿಯಾಲಿಸ್ ಬಲ'ದ ಪರಿಣಾಮವಾಗಿ ಆ ಪ್ರದೇಶಗಳನ್ನು ರಭಸವಾಗಿ ಪರಿಭ್ರಮಿಸುತ್ತವೆ. ಹೀಗೆ 'ನಿರಂತರ ಸುತ್ತುವ ಸಾಗರ ಪ್ರವಾಹಗಳು ಮತ್ತು ಅವುಗಳಿಂದ ಪರಿವರಿಸಲ್ಪಟ್ಟ ಚಲನಾರಹಿತ ಸಾಗರ ಪ್ರದೇಶ' ಇಂಥ ನಿಸರ್ಗ ನಿರ್ಮಿತಿಯೇ 'ಸಾಗರ ಸುಳಿ'.



ಧರೆಯ ಕಡಲಿನಾವಾರದಲ್ಲಿ ಹಲವಾರು ಸಾಗರ ಸುಳಿಗಳಿವೆ. ಅವುಗಳ ಪೈಕಿ ಕಲ್ಪನಾತೀತ ವಿಸ್ತಾರದ ಸುಳಿಗಳು ಐದು: ಉತ್ತರ ಪೆಸಿಫಿಕ್ ಸುಳಿ (ಭೂಪಟ 2 ಮತ್ತು 3ರಲ್ಲಿ ಸಂಖ್ಯೆ 1), ದಕ್ಷಿಣ ಪೆಸಿಫಿಕ್ ಸುಳಿ (ಸಂಖ್ಯೆ 2), ಉತ್ತರ ಅಟ್ಲಾಂಟಿಕ್ ಸುಳಿ (ಸಂಖ್ಯೆ 3), ದಕ್ಷಿಣ ಅಟ್ಲಾಂಟಿಕ್ ಸುಳಿ (ಸಂಖ್ಯೆ 4) ಮತ್ತು ಹಿಂದೂ ಮಹಾಸಾಗರ ಸುಳಿ (ಸಂಖ್ಯೆ 5).

ವಿಪರ್ಯಾಸ ಏನೆಂದರೆ, ಸಾಗರ ಪ್ರವಾಹಗಳು ತಮ್ಮೊಡನೆ ಎಳೆದು ತರುವ ಮಾನವ ಮೂಲದ ನಾನಾ ವಿಧ ಕಸಗಳ ರಾಶಿಗಳು ಇಂಥ ಸುಳಿಗಳ ಮಧ್ಯದ ಪ್ರಶಾಂತ ಸ್ಥಳಗಳಲ್ಲಿ ನಿರಂತರ ಸಂಗ್ರಹಗೊಳ್ಳುತ್ತವೆ; ಮಹಾನ್ ತಿಪ್ಪೆಗಳಂತಾಗುತ್ತವೆ. ಅವೇ 'ಗಾರ್ಬೇಜ್ ಪ್ಯಾಚ್'ಗಳು. ಅತ್ಯಂತ ದೊಡ್ಡ ಸಾಗರ ಸುಳಿಯಾದ, ಎರಡು ಕೋಟಿ ಚದರ ಕಿ.ಮೀ ವಿಸ್ತಾರದ 'ಉತ್ತರ ಪೆಸಿಫಿಕ್ ಸುಳಿ'ಯಲ್ಲಿ ಎಂದಿಗೂ ಕೊಳೆಯದ, ಸಾಗರ ಜೀವಜಾಲಕ್ಕೆ ಅಪಾಯಕಾರಿಯೂ ಆದ ಒಂದು ಲಕ್ಷ ಟನ್‌ಗೂ ಅಧಿಕ ಪ್ಲಾಸ್ಟಿಕ್ ಕಸ ಸಂಗ್ರಹವಾಗಿದೆ! ಅದಕ್ಕೇ ಅದು 'ದಿ ಗ್ರೇಟ್ ಪೆಸಿಫಿಕ್ ಗಾರ್ಬೇಜ್ ಪ್ಯಾಚ್' ಎಂದೇ ಪ್ರಸಿದ್ಧವಾಗಿದೆ!

■ ಎನ್. ವಾಸುದೇವ್